ದಿನಾಂಕ 03.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ಬಿ.ಕೆ ವಕೀಲರಿಂದ 1ನೇ ಪ್ರತಿವಾದಿಯ ಪರವಾಗಿ

1. ನನ್ನ ಹೆಸರು ಪಾರ್ವತಮ್ಮ ಮತ್ತು ನನ್ನ ಗಂಡನ ಹೆಸರು ಕೆ.ಜೆ ಕೃಷ್ಣಸ್ವಾಮಿ ಎಂದರೆ ಸರಿ. 1ನೇ ಪ್ರತಿವಾದಿಯ ಉಗ್ರಾಣಕ್ಕೆ 50 ಕೆ.ಜಿ ತೂಕದ 40 ಚೀಲ ರಾಗಿಯನ್ನು ದಿನಾಂಕ 25.02.2022 ರಂದು ಮಾರಾಟ ಮಾಡಿ 63,480/- ರೂಗಳ ವೋಚರ್‌ನ್ನು 1ನೇ ಪ್ರತಿವಾದಿಯಿಂದ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿ ನನ್ನ ಗಂಡ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆಗೆ ಬರಬೇಕಾದ ಹಣವು 2ನೇ ಪ್ರತಿವಾದಿಯ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ನನ್ನ ಪರವಾಗಿ 1ನೇ ಪ್ರತಿವಾದಿಯು ಠಾಣೆಗೆ ದೂರು ದಾಖಲಿಸಿದ್ದರು ಎಂದರ ಸರಿ. 2ನೇ ಪ್ರತಿವಾದಿಯು ಪೋಲೀಸರ ಮುಂದೆ ಹಾಜರಾಗಿ ಹಣ ಪಾವತಿ ಮಾಡಲು ಕಾಲಾವಕಾಶ ಕೋರಿದ್ದರು ಸಹ ನನಗೆ ಹಣ ಪಾವತಿ ಮಾಡಿಲ್ಲ ಎಂದರೆ ಸರಿ. ಈ ಸಂಗತಿಗಳು ನನಗೆ ಗೊತ್ತು ಎಂದರೆ ಸರಿ. 2ನೇ ಪ್ರತಿವಾದಿಯು ನನಗೆ ಹಣ ಪಾವತಿ ಮಾಡಬೇಕು ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.